
ಕಾನನ
MAY 2011
ನಿಸರ್ಗದೆಡೆಗೆ ಪಯಣ
© W C G
W C G
WILDLIFE
CONSERVATION
GROUP



# ಕಾನನ

ನಿಸರ್ಗದೆಡೆಗೆ ಪಯಣ

MAY 2011

## ಲೇಖನಗಳು

* ಹಕ್ಕಿಲೋಕ – ನಾಗೇಶ್.ಓ.ಎಸ್
* ತಪ್ಪಲು – ಶಂಕರಪ್ಪ.ಕೆ.ಪಿ
* ಹಸು ಕಂದನ ಮರಣ – ಕೃಷ್ಣನಾಯಕ್

ಅನಿಸಿಕೆಗೆ
E-mail: kaanana.mag@gmail.com

ಮುಖಪುಟ : ನತ್ತಿಂಗ – Common Indian Nightjar.

© WCG

# ಸಂಪಾದಕೀಯ

ಪ್ರಿಯ ಓದುಗರೇ. . . .

ಈ ಬಾರಿಯ ಸಂಚಿಕೆಯಲ್ಲಿ ನತ್ತಿಂಗ ಹಕ್ಕಿಯ ಬಗ್ಗೆ ಮಕ್ಕಳು ಮೊದಲ ಬಾರಿ "**ಹಕ್ಕಿಲೋಕ**"ಕ್ಕೆ ಕಾಲಿರಿಸುವ ರೀತಿ ಹಾಗೂ ಅವರ ಸ್ವಾಭಾವಿಕ ಕುತೂಹಲ ಕೆರಳುವ ಪರಿಯ ಬಗ್ಗೆ ಮತ್ತು ನತ್ತಿಂಗದ ಜೀವನದ ಬಗ್ಗೆ ಸೊಗಸಾಗಿ ನಾಗೇಶ್ ರವರು ಚಿತ್ರಿಸಿದ್ದಾರೆ.

"**ತಪ್ಪಲು**" ಮಕ್ಕಳ ವನವಿಹಾರ ಕುರಿತ ಚಿತ್ರದರ್ಶನ. ಇದರಲ್ಲಿ ಮಕ್ಕಳು ಹಾಡಿ ಕುಣಿದು ಕಲಿತ ವಿಚಾರಗಳು ಅಪಾರ. ಮಳೆಯಲ್ಲಿ ನೆನೆದು ಜೀವಜಾಲದ ಬಗ್ಗೆ ತಿಳಿದುಕೊಂಡು, ಸ್ವತಃ ತಾವೇ ಪಾತ್ರದಾರಿಗಳಾಗಿ ನಟಿಸಿ ಜೀವಜಾಲದ ಸಂಕೀರ್ಣತೆಯ ಬಗ್ಗೆ ತಿಳಿದುಕೊಂಡುದನ್ನು ತಪ್ಪಲಿನಲ್ಲಿ ಕಾಣಬಹುದು

"**ಹಸುಕಂದನ ಮರಣ**" ಕವನದಲ್ಲಿ ಗ್ರಾಮೀಣ ಸೊಗಡು, ಹಸು- ರೈತನ ಅವಿನಾಭಾವ ಸಂಬಂಧ, ಕಂದನನ್ನು ಕಳೆದುಕೊಂಡ ಇಡೀ ಕುಟುಂಬದ ಜೊತೆ ಹಸುವಿನ ದುಃಖವನ್ನು ನಾಯಕ್ ರವರು ಮನೋಹರವಾಗಿ ಚಿತ್ರಿಸಿದ್ದಾರೆ.

ಪ್ರಕೃತಿಯ ಬಗ್ಗೆ ಅರಿವು ಮೂಡಿಸುವ ನಮ್ಮ ಪುಟ್ಟ ಪತ್ರಿಕೆಯನ್ನು ಓದಿ ಸಲಹೆ ಸೂಚನೆಯನ್ನು ನಿಮ್ಮಿಂದ ಆಶಿಸುತ್ತೇವೆ. ಈ ಪತ್ರಿಕೆಯು ನಿಮಗಾಗಿಯೇ ಇದೆ, ವನ್ಯಲೋಕ, ಕಾಡು, ಪ್ರಾಣಿ–ಪಕ್ಷಿಗಳು, ಮತ್ತು ಸಾಹಿತ್ಯ ವಿಚಾರಗಳು, ಕವನ, ಕಥೆಗಳು, ವಿಜ್ಞಾನ, ಪ್ರವಾಸ, ಛಾಯಚಿತ್ರಗಳು ಮುಂತಾದ ವಿಷಯಗಳ ಲೇಖನಗಳನ್ನು ಕಳುಹಿಸಬಹುದಾದ

ಇ–ಮೇಲ್ ವಿಳಾಸ : kaanana.mag@gmail.com



# ಹಕ್ಕಿ ಲೋಕ

## ನತ್ತಿಂಗಹಕ್ಕಿ

**ವೈಜ್ಞಾನಿಕ ಹೆಸರು :** *Caprimulgus asiaticus*

**ಇಂಗ್ಲೀಷ್ ಹೆಸರು :** Common Indian Nightjar



ಪ್ರೋಕು ಮತ್ತು ಎರಡು ಜಡೆಯ ನಂದು, ಕಾಡು ಮಗ್ಗುಲಲ್ಲೇ ಇರುವ ಗುಡ್ಡಯ್ಯನದೊಡ್ಡಿಯಲ್ಲಿ ಬೆಳೆಯುತ್ತಿರುವ ಮಕ್ಕಳು. ಅವಕ್ಕೆ ರಜೆಯಲ್ಲಿ ಅಮ್ಮನೊಡಿಗೆ ಹರಿಯುವ ಹಳ್ಳಕ್ಕೆ ಹೋಗುವುದಕ್ಕೆ ಎಲ್ಲಿಲ್ಲದ ಹಿಗ್ಗು. ಹಳ್ಳದ ದಾರಿಯಲ್ಲಿ ಬಟ್ಟೆಗಳನ್ನು ತಲೆಯ ಮೇಲೆ ಹೊತ್ತು ನಡೆಯುತ್ತಿದ್ದ ಅಮ್ಮನ ಹಿಂದೆ ಪುಳಕ ಪುಳಕ ಎಂದು ಹೆಜ್ಜೆಯಾಕುತ್ತಾ ಕುಣಿಯುತ್ತಾ ಸಾಗುತ್ತಿದ್ದವು. ನಿಬಿಡ ಮರಗಳಿಂದ ಆವೃತವಾದ ಹಳ್ಳದ ತಟದಲ್ಲಿ ಬಟ್ಟೆ ಒಗೆಯುತ್ತಿದ್ದ ಅಮ್ಮನನ್ನು ಬಿಟ್ಟು ಈ ಮಕ್ಕಳು ಸ್ವಲ್ಪ ಪಕ್ಕದಲ್ಲಿ ಕಲ್ಲುಗಳ ಮೇಲೆ ಕುಳಿತು ಹರಿಯುವ ನೀರಿಗೆ ಕಲ್ಲುಗಳನ್ನು ಹಾಕಿ ಸುಖಿಸುತ್ತಿದ್ದರು.  ಹತ್ತಿರವಿದ್ದ ಎಲ್ಲಾ ಕಲ್ಲುಗಳೂ ಖಾಲಿಯಾಗಿ ಪಕ್ಕದಲ್ಲಿದ್ದ ಸಣ್ಣ ಕಲ್ಲುಗಳ ರಾಶಿಯ ಬಳಿ **ಪ್ರೋಕು** ಬಂದಾಗ ಅವನಿಗೆ ಒಂದು ಸತ್ತ ಸಣ್ಣ ಹಕ್ಕಿ ಮರಿ ಸಿಕ್ಕಿತು. ಅದನ್ನು ತನ್ನ ಅಕ್ಕನಿಗೆ ತೋರಿಸಿದ. ನಂದು ಅವನಿಗಿಂತ ಬುದ್ಧಿವಂತೆಯಾದ್ದರಿಂದ ಸತ್ತಿರುವ ಈ ಹಕ್ಕಿಮರಿಯನ್ನು ಮಣ್ಣಿನಲ್ಲಿ ಹೂತು ಸಮಾಧಿ ಮಾಡುವುದು ಎಂದು ತೀರ್ಮಾನಿಸಿದಳು.

ಗುಂಡಿತೋಡಿ ಇನ್ನೇನು  ಮಣ್ಣು ಮುಚ್ಚಬೇಕು ಅಷ್ಟರಲ್ಲಿ ಒಗೆದ ಸೀರೆಯನ್ನು ಒಣಗಾಕಲು ಬಂದ ಅಮ್ಮನಿಗೆ ನಂದು ಕಾತರತೆ ಮತ್ತು ಮುಗ್ಧತೆಯಿಂದ ಎರಡೂ ಕೈಗಳಲ್ಲಿ ಸತ್ತ ಮರಿಯನ್ನು ತೋರಿಸಿ

“ಸತ್ತೋಗದೆ ಪಾಪ!

ಮಣ್ಣ್ ಮಾಡ್ತಾ ಇದ್ದೀವೀ” ಎಂದಳು.



ಥೂ ನಿಮ್ಮಾ!

ಅದು ಸೊತ್ತೋಗಿಲ್ಲಾ ಕಣೆ!. **ನತ್ತಿಂಗನ್** ಮರಿ ಅದು ಇನ್ನು ಕಣ್ಬಿಟ್ಟಿಲ್ಲಾ. !

“ಏಳು ಮೇಲೆ! ಎಲ್ಲಿತ್ತೋ ಅಲ್ಲಿ ಬಿಟ್ಬುಟ್ಟು ಬರ್ರಿ ಬೇಗ ಬಟ್ಟೆ ಒಣಗಾಕಬೇಕು. ಹುಳಹುಪ್ಪೇನೆಲ್ಲಾ ಮುಟ್ ಬ್ಯಾಡ್ರೋ ಅಂದ್ರೆ ಎಲ್ಲಿ ಕೇಳ್ತೀರ ನೀವು” ಎಂದು ನಂದುವಿನ ಕೆನ್ನೆಗೆ ತಿವಿದಳು. ತಾವು ಮಾಡಿದ ಅಪರಾದ ತಿಳಿಯದ ಪೋಕು ಗುಂಡಗಿದ್ದ ಮುಖವನ್ನು ಕೋಲಗೆ ಮಾಡಿಕೊಂಡ.

ಹಕ್ಕಿಮರಿಯನ್ನು ಅದು ಇದ್ದ ಜಾಗಕ್ಕೆ ಬಿಡಲು ಹೋದಾಗ ನತ್ತಿಂಗ ಹಕ್ಕಿ ಪೋಕುವಿನ ಕಾಲಬುಡ ದಿಂದಲೇ ಹಾರಿ ಇಬ್ಬರನ್ನು ಬೆಚ್ಚಿ ಬೀಳಿಸಿತು. ಹಾರಿ ಮಾರು ದೂರದಲ್ಲಿ ಕಣ್ಮುಚ್ಚಿ ಕುಳಿತುಕೊಂಡಿತು. **ಒಣ** ಹುಲ್ಲಿನಲ್ಲಿ ಕುಳಿತ ಆ ಹಕ್ಕಿ ಹುಲ್ಲಿನ ಬಣ್ಣಕ್ಕೆ ಹೇಗೆ ಒಗ್ಗಿತ್ತೆಂದರೇ ಕಣ್ಣರಳಿಸಿ ನೋಡಿದರೂ ಅಲ್ಲಿ ಪಕ್ಷಿ ಕುಳಿತಿದೆ ಎಂದು ಗುರುತಿಸುವುದು **ಸಾಧ್ಯ**ವಿರಲಿಲ್ಲ. ಎಷ್ಟೋ ಪಕ್ಷಿಗಳು ವೈರಿಗಳಿಂದ ರಕ್ಷಿಸಿಕೊಳ್ಳಲು ತನ್ನ ಮೈಬಣ್ಣವನ್ನು ಅದು ವಾಸಿಸುವ ಪರಿಸರಕ್ಕೆ ಹೊಂದುವಂತೆ ಮಾರ್ಪಾಡಿಸಿಕೊಂಡಿವೆ. **ಆ**ದರೇ ಈ ನತ್ತಿಂಗ ಪಕ್ಷಿಯು ಬೂದು ಮಿಶ್ರಿತ ಕಂದು ಬಣ್ಣವಿರುವದರಿಂದ ಒಣಗಿದ ಎಲೆಗಳ ನಡುವೆ ಕುಳಿತರೆ ಅದರ **ವೈರಿಗಳಿಗಿರಲಿ** ನಮಗೂ ಕಂಡು ಹಿಡಿಯುವುದು ಬಹಳ ಕಷ್ಟ.

ಇದು ರಾತ್ರಿವೇಳೆ ಬಹಳ **ಚಟುವಟಿಕೆಯಿಂದ** ಇದ್ದು, ಹಾರಾಡುವ ಪತಂಗ ಮತ್ತು ಇತರೆ ಕೀಟಗಳನ್ನು ಹಿಡಿದು ಕಬಳಿಸುತ್ತದೆ. ಗೊರವಂಕ ಗಾತ್ರವಿರುವ ಇದಕ್ಕೆ **ಕಪ್ಪನೆಯ** ಕೊಕ್ಕು ಇದೆ. ಕೊಕ್ಕಿನ ಬುಡದಲ್ಲಿ ಮೀಸೆಗಳಂತಹ ಚೂಪು ಪುಕ್ಕಗಳಿವೆ. ಸಾಮಾನ್ಯವಾಗಿ ನೆಲದ ಮೇಲೆ ಎರಡು ಮೂರು ಮೊಟ್ಟೆಗಳನಿಟ್ಟು 16 -18 ದಿನ ಕಾವುಕೊಟ್ಟು ಮರಿ ಮಾಡುತ್ತವೆ.



ಮೊಟ್ಟೆಯಿಂದ ಹೊರಬಂದ ಮರಿಗಳು ತರಗೆಲೆಯ ಬಣ್ಣವೇ ಇದ್ದು, ಸತ್ತಂತೆ ನಿಶ್ಚಲವಾಗಿ ಕಣ್ಣುಮುಚ್ಚಿ ಕುಳಿತಿರುತ್ತವೆ. ಒಂದೆರಡು ವಾರದಲ್ಲೇ ಸ್ವಂತ ಆಹಾರವನ್ನು ತಾವೇ ಸಂಪಾದಿಸಿ ತಿಂದು ಬದುಕಲು ಸಮರ್ಥವಾಗಿರುತ್ತವೆ.

ಪೋಕು ಮತ್ತು ನಂದು ತಿಂಗಳ ಬೆಳಕಿನಲ್ಲಿ ಮನೆಯ ಮುಂದೆ ಕುಳಿತು ಊಟ ಮಾಡುತ್ತಿದ್ದಾಗ ದೂರದ ಬೋಳು ಮರದ ತುದಿಯಲ್ಲಿ ಕುಳಿತ ನತ್ತಿಂಗಹಕ್ಕಿ, ಹಾಳವಾದ ನಿಂತ ನೀರಿಗೆ ಕಲ್ಲೆಸದಾಗ ಉಂಟಾಗುವ ಸದ್ದಿನಂತೆ

ಚುಣುಕ್. . .

ಚುಣುಕ್. . . ಎಂದು ಕೂಗುತ್ತಿತ್ತು.

# ತಪ್ಪಲು





ನಿಸರ್ಗದೆಡೆಗೆ ಮಕ್ಕಳು ಬಹುಬೇಗ ಸ್ವಾಭಾವಿಕವಾಗಿ ಸೆಳೆಯಲ್ಪಡುತ್ತಾರೆ. ನೀರಿನಲ್ಲಿ ಆಟವಾಡುವುದು, ಮಣ್ಣಿನಲ್ಲಿ ಗೊಂಬೆ ಮಾಡುವುದು, ಬಣ್ಣದ ರೆಕ್ಕೆಯ ಚಿಟ್ಟೆಯ ಹಿಂದೆ ಓಡುವುದು ಆ ಬಾಲ ಮೆದುಳಿಗೆ ಯಾವುದೋ ಬಗೆಯ ಸುಖವೀಯುತ್ತದೆ.

ಮಕ್ಕಳಿಗೆ ಅವು ಬದುಕಿರುವ ಭೂಜೀವ ಪ್ರದೇಶದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಶ್ರೀ ರಾಮಕೃಷ್ಣ ವಿದ್ಯಾಕೇಂದ್ರ ಶಿವನಹಳ್ಳಿಯಲ್ಲಿ ಒಂದು ದಿನದ ನಿಸರ್ಗ ನಡಿಗೆ ಏರ್ಪಡಿಸಲಾಗಿತ್ತು.

ಆ ಭಾನುವಾರ ರಾತ್ರಿ ಅಕಾಲಿಕ ಮಳೆಯಾಗಿ ಭೂಮಿ ತಂಪಾಗಿ, ಮರಗಿಡಗಳು ನಗುವಂತೆ ಅಚ್ಚಹಸಿರಾಗಿ ಭಾಸವಾಗುತ್ತಿತ್ತು.

ವತ್ತಾರೆನೇ ಇಪ್ಪತ್ಮೂರು ಬಾಲ–ಬಾಲಕಿಯರೊಡನೆ ನೀರ್ಬಾಟ್ಲು, ತಿಂಡಿಪೊಟ್ಟಣಗಳನ್ನು ಹಿಡಿದು ಜೀಡಿ ಗುಡ್ಡಕ್ಕೆ ಹೊರಟೆವು.





ಹೋಗುವಾಗ ಹಲವು ವಿಧದ ಪಕ್ಷಿಗಳನ್ನು ಕಂಡು ಅವುಗಳ ಚಿಲಿಪಿಲಿ ಗಾನವನ್ನು ಹಾಲಿಸಿದರು.. ಹಲವು ವಿಧದ ಕಪ್ಪೆಗಳೂ, ಮಿಡತೆಗಳು, ಚಿಟ್ಟೆಗಳನ್ನು ಕಂಡು ಹರ್ಷಗೊಂಡರು. ನಾನು ನನಗೆ ತಿಳಿದ ಕೆಲವು ಕಾಡಿನ ಔಷಧೀಯ ಸಸ್ಯಗಳ ಬಗ್ಗೆ, ವನ್ಯವೃಕ್ಷಗಳ ಬಗ್ಗೆ, ಕೆಲವು ಪಕ್ಷಿಗಳ ಜೀವನಕ್ರಮದ ಬಗ್ಗೆ ತಿಳಿಸಿದೆ.
ಪ್ರೈಮರಿ ಸ್ಕೂಲಿನ ಮಕ್ಕಳೊಂದಿಗೆ ಹೊರಸಂಚರ ಹೋಗಿ ಪಕ್ಷಿವೀಕ್ಷಣೆ ಸಾಧ್ಯವೇ ಇಲ್ಲಾ! ಎಂದು ಚನ್ನಾಗಿ ಮನವರಿಕೆಯಾಗಿ,







ಕಾಡನ್ನು ಕಂಡ ಕೂಡಲೇ ತಲೆಗೊಂದರಂತೆ ಮಾತನಾಡುತ್ತಾ ಕಿರುಚುತ್ತಾ ಕುಣಿಯುತ್ತಾ ಸಾಗಿದ ನಮ್ಮ ಕಿರು ವಾನರ ಸೈನ್ಯವನ್ನು ಕಂಟ್ರೋಲ್ ಗೆ ತರಲು, ಸಣ್ಣ ಸಣ್ಣ ನಾಲ್ಕು ಗುಂಪುಗಳನ್ನು ಮಾಡಿ, ಚೇಸ್ಟೆ ಮಾಡಿ ಕಿರಿಚಿ ಕೂಗುವ ಗುಂಪಿಗೆ ಒಂದೇ ಒಂದು ಸೊನ್ನೇ ಹಾಕುತ್ತೇನೆ ಎಂದುದ್ದೇ ತಡ–ಇನ್ನೆಲ್ಲಿ ಪರೀಕ್ಷೆಯಲ್ಲಿ ಪೇಲಾಗುತ್ತೇವೆಯೋ ಎಂಬ ಭಯ ದಿಂದ ಎಲ್ಲರೂ ಗಪ್ ಚಿಪ್ ಆದಾಗ ನಮ್ಮ ತಲೆಯ ಮೇಲೇ ಬಹಳ ಅಪರೂಪವಾದ ಮಂಗಟ್ಟೆ ಪಕ್ಷಿ ಸುಂಯ್ ಸುಂಯ್ ಎಂದು ರೆಕ್ಕೆ ಬಡಿಯುತ್ತ ಹಾರಿ ಹೋಯಿತು!.

ಎಲ್ಲಾ ಗುಂಪಿಗೂ ಭೂತಕನ್ನಡಿಯನ್ನು ಕೊಟ್ಟಿದ್ದೆನದ್ದರಿಂದ ಸಣ್ಣ ಸಣ್ಣ ಇರುವೆ, ಬಣ್ಣದ ಹೂಗಳನ್ನು ನೋಡಿ ಖುಷಿಪಡುತ್ತಿದ್ದುದು ಅವರ ಮೊಗದಲ್ಲೇ ಕಾಣುತ್ತಿತ್ತು. ಸುಮಿ ನೀರಿನಲ್ಲಿ ಬೆಳೆದಿರುವ ಸಣ್ಣ ಹಳದೀ ಹೂವನ್ನು ಹ್ಯಾಂಡ್ ಲೇನ್ಸಿನ ಮೂಲಕ ದೊಡ್ಡದಾಗಿ ನೋಡಿ ಒಬ್ಬಳೆ ನಗುತ್ತಿದ್ದಳು.
ಏ ಚಪಾತಿ ಇಲ್ಲೊ್ನೀಡೋ! ಇರವೆ ಏಷ್ಟು ಗಾತ್ರ ಕಾಣ್ತದೆ. ವಾವ್!





ಐನೂರು ವರ್ಷದ ಸೈಕಸ್ ಜಾತಿಯ ಗಿಡವನ್ನು ನೋಡಿ, ಮೂಗಿನ ಮೇಲೆ ಬೆರಳಿಟ್ಟುಕೊಂಡರು ಜೀಡಿ ಗುಡ್ಡದ ಮೇಲೆ ಕಾಣುವ ಭವ್ಯ ವನರಾಶಿಯ ಮುಂದೆ ಕುಳಿತು ನೋಡಿದರು, ಆಸ್ವಾದಿಸಿದರು, ಕುಣಿದರು, ಜಿಗಿದರು, ನೀರೆರೆಚಾಡಿದರು. ಬಂಡೆಯ ಮೇಲೆ ಇರುವ ಸಣ್ಣಸಣ್ಣ ಹೊಂಡಗಳಲ್ಲಿ ಇರುವ ಜೀವವೆವಸ್ಥೆಯ ಬಗ್ಗೆ ವಿಕ್ಷಿಸಿದರು. ಅದರಲ್ಲಿರುವ ಸಣ್ಣಸಣ್ಣ ಕ್ರಿಮಿ ಕೀಟ,ಪಾಚಿ,ಗೊದವೊಟ್ಟೆ, ಕಪ್ಪೆ ಮರಿ, ಎರೋಪ್ಲೆನ್ ಚಿಟ್ಟೆ, ಡ್ಯಾಂಸೆಲ್‌ಪ್ಲೈಗಳನ್ನು ನೋಡಿ ಚಿತ್ರ ಬರೆದುಕೊಂಡರು. . ನಾನು ಆರುಕಾಲಿರುವ ಎಲ್ಲಾ ಕ್ರಿಮಿಗಳೂ ಕೀಟಗಳ ಗುಂಪಿಗೆ ಸೇರುತ್ತವೆ ಎಂದು ತಿಳಿಸಿದೆ.



ಬೆಟ್ಟದ ಮೇಲೆ ಹುಲ್ಲಿನಲ್ಲಿ ಆರು ಅಂಗುಲದ ಕಡ್ಡಿಹುಳು ಯಾವುದೋ ಕೀಟವನ್ನು ಬೇಟೆಮಾಡಿ ತಿನ್ನುತ್ತಿದ್ದನ್ನು ಅನ್ವೇಷಣೆ ಮಾಡಿದ ದೇವ್ರುಮುನಿಯ ಎಲ್ಲರಿಗೂ ಕರೆದು ತೋರಿಸಿದ. ಇನ್ನೊಬ್ಬ ಯಾವುದೋ ವಿಚಿತ್ರ ಕಾಯಿಯನ್ನು ಕಿತ್ತುತಂದು ನನಗೆ ತೋರಿಸಿ, ಅದು ಯಾವುದೆಂದು ಕೇಳಿದ. ಒಂದೇ ಪ್ರಭೇದದಲ್ಲಿ ನೂರಾರು ಉಪಜಾತಿಗಳಿರುವ ಸಸ್ಯಸಂಕುಲದಲ್ಲಿ ಬರೀ ಕಾಯಿಯನ್ನು ನೋಡಿ ಯಾವಗಿಡ ಎಂದು ಗುರುತಿಸಿ ಹೇಳುವುದು!!



ಬಂಡೆಗಳ ಸಂದುಗಳಲ್ಲಿ ಬೆಳೆಯುವ ಆ ಗಿಡದ ಬಳಿ ಬಂದು ಪರೀಕ್ಷಿಸಿದಾಗ, ಅದನ್ನು ನಾನು ಹದಿನೈದು ವರ್ಷಗಳ ಹಿಂದೆ ಕುರಿಮೇಕೆ ಮೇಯಿಸುವಾಗ ನೂರಾರು ಬಾರಿ ಮುರಿದು ಮೇಕೆಗೆ ತಿನ್ನಿಸಿದ್ದೇನಾದರೂ, ಆ ಕಾಯಿಗಳನ್ನು ಕಂಡಿದ್ದು ಈಗ ಮಾತ್ರ. ಅದರ ಕೆಲವು ಫೋಟೊ ತೆಗೆದು ನನ್ನ ಸಸ್ಯಶಾಸ್ತ್ರಜ್ಞ ಮಿತ್ರ ಶಿಂಡೆಗೆ ಕಳಿಸಿದ್ದೇನೆ.


ದೂರದಲ್ಲಿ ಕರಿಮೋಡ ಮಳೆ ತರಿಸುವ ಸೂಚನೆ ಕೊಡುತ್ತಿತ್ತು. ಬೆಳಿಗ್ಗೆಯಿಂದ ಅವರು ನೋಡಿದ ಹಲವು ಜೀವಿಗಳ ಮತ್ತು ಮರಗಳ ಹೆಸರನ್ನು ಸಣ್ಣ ಸಣ್ಣ ಚೀಟಿಗಳಲ್ಲಿ ಬರೆದು, ಜೀವಿ ಜೀವಿಗಳ ನಡುವೆ ಇರುವ ಜೀವಜಾಲ ಸಂಬಂಧವನ್ನು ದಾರದ ಆಟವಾಡಿಸಿದಾಗ ಆ ಸಂಕೀರ್ಣತೆಯನ್ನು ಕಂಡು ಅವರಿಗೇ ಸೋಜಿಗವಾಯಿತು.

ಮಳೆ ಬರುವ ಮೊದಲು ಮನೆ ಸೇರಲು ದಾರಿಯಲ್ಲಿ ಸಾಗುವಾಗ ಭಾರತದ ದೇಶದ ಕರಡಿಗಳ ಜೀವನ ಮತ್ತು ಅವುಗಳಿಗೆ ಅಗುತ್ತಿರುವ ತೊಂದರೆಗಳ ಬಗ್ಗೆ ತಿಳಿಸಿ, ಎಲ್ಲರಿಗೂ ಕರಡಿ ಮುಖವಾಡಗಳನ್ನು ಕೊಟ್ಟೆ ! ಕೆಲವೇ ಕ್ಷಣಗಳಲ್ಲಿ ನನ್ನ ಕಿರುವಾನರ ಸೈನ್ಯ ಜಾಂಬವಸೈನ್ಯವಾಗಿ ಹೋಯಿತು. ಬೆಟ್ಟವಿಳಿದು ಬರುವಾಗ ತಲೆಯ ಮೇಲಿದ್ದ ಕರಿ ಮೋಡ ಕರಗಿ ಬರೀ ನೀರೇ ಸುರಿದು, ಎಲ್ಲರೂ ಒದ್ದೇ ಮುದ್ದೆಯಾಗಿ ಹೋದೆವು. ಮಳೆ ನಿಂತರು ಬಾಲಕರ ಮೂಗಿನ ತುದಿಯಲ್ಲಿ ಇನ್ನೂ ನೀರಿನ ಹನಿ ತೊಟ್ಟಿಕ್ಕುತ್ತಿತ್ತು.



– ಶಂಕರಪ್ಪ ಕೆ ಪಿ

# ಹಸು ಕಂದನ ಮರಣ



ಹಸು ಕಂದನ ಮರಣ
ಹಸು ಕಂದನ ಮರಣ
ಮನೆಯಲ್ಲಿ ಮರಣಹೋಮ
ಶೋಕಾಚರಣೆ ಇಂದು ಮನೆಯಲ್ಲಿ.

ಮುಂಜಾವದಲ್ಲೆದ್ದು ಕೊಟ್ಟಿಗೆಯಲ್ಲಿ ಅಪ್ಪ
ಹಸು ಕಂದನ ಮಾತಿಲ್ಲ, ಹಸು ಕಂದಗೆ ಉಸಿರಿಲ್ಲ
ತಲೆಯ ಮೇಲೆ ಕೈ ಇಟ್ಟು, ಅಪ್ಪ
ಕರೆದರು ನನ್ನ ತಾಯಿಯ ನೋವಿನಿಂದ

ನಾ ಹಾಸಿಗೆಯಿಂದ ಕಣ್ಣ ತೆರೆದಾಗ ಬೆಳಕು
ಹರಿದಿರಲಿಲ್ಲ, ಬೆಳ್ಳಿಚುಕ್ಕಿ ಮೂಡಿರಲಿಲ್ಲ
ಬನವದು ಮರಣವಾಯಿತು ಘಳಿಗೆಯಲಿ
ಆ ಸೂರ್ಯ ಕಣ್ಣ ತೆರೆದ ಮೂಡಣದಲ್ಲಿ

ನನ್ನ ತಂಗಿ ಪೂಜೆ ಸಲ್ಲಿಸಿ ಕಣ್ಣೀರಿಟ್ಟಳು
ನೆನ್ನೆಯವರಿಗೂ ಜೊತೆಗಿದ್ದ ಕಂದಮ್ಮ
ಭೂತಾಯಿಯ ಮಡಿಲೊಳಗೆ ಬೆರೆತ
ಹಿತ್ತಲೊಳಗೆ ಅಜ್ಜಿಯ ಶೋಕ ಕೇಳುವವರಿಲ್ಲ

ಎಂದಿನಂತೆಯೇ ಆ ತಾಯಿಯ ಬದುಕು
ಆ ನಗು ಮುಖದ ಕಂದನ ಮಾತಾಡಿಸಲಿಲ್ಲ
ಒಂದನಿ ಕಣ್ಣೀರಿಡಲಿಲ್ಲ, ನೆನಪಾಯಿತೇನೋ
ಕಂದಮ್ಮಗೆ ಹಾಲುಣಿಸಲು ಕಿರುಚಿತ್ತಿದೆ ಈಗ!

– ಕೃಷ್ಣನಾಯಕ್
ವನ್ಯಜೀವಿಗಳ ಬಗ್ಗೆ ಪ್ರೀತಿಯಿರುವ ಇವರು
ಮದೇಶ್ವರ ರಕ್ಷಿತ ಅರಣ್ಯದ ಬಳಿ ರೇಷ್ಮೆ ಕೃಷಿ ಜೊತೆಗೆ
ಸಾಹಿತ್ಯ ಕೃಷಿಯಲ್ಲಿ ತೊಡಗಿರುವ
ವಿಜ್ಞಾನ ಪಧವೀಧರರು. -9611428901